ಸಾಕ್ಷಿಯನ್ನು ದಿಃ01.07.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರಿಂದಃ**

1. ನಾನು ಮದುವೆಯಾಗಿ ಸುಮಾರು 20-30 ವರ್ಷಗಳಾಗಿರುತ್ತದೆ. ನಾನು ಪ್ರೀತಿಸಿ ಮದುವೆಯಾಗಿರುತ್ತೇನೆ. ನನ್ನ ಮದುವೆ ಕಾಲಕ್ಕೆ 80 ಗ್ರಾಂ ಚಿನ್ನ ಮತ್ತು ರೂ.5 ಲಕ್ಷ ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ತಮ್ಮನ ಹೆಂಡತಿ ಇರುತ್ತಾಳೆ. ನನ್ನ ತಮ್ಮ ಮೃತನಾಗಿರುತ್ತಾನೆ. 4 ಮತ್ತು 5 ನೇ ಪ್ರತಿವಾದಿಗಳು ನನ್ನ ಮೃತ ತಮ್ಮನ ಮಕ್ಕಳಿರುತ್ತಾರೆ. ಸದರಿ 3 ರಿಂದ 5 ನೇ ಪ್ರತಿವಾದಿಗಳು 1 ಎಕರೆ ಜಮೀನನ್ನು ಉಳುಮೆ ಮಾಡುತ್ತಾರೆ. ಸದರಿ 1 ಎಕರೆ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಶಂಕರರವರ ಜಮೀನು, ಉತ್ತರಕ್ಕೆ ಜಯಮ್ಮ ಮತ್ತು ದಕ್ಷಿಣಕ್ಕೆ ಕುಳ್ಳಪ್ಪ, ಲೀಲಾ, ಮಾದೇವ ಮತ್ತು ಇತರರ ಜಮೀನು ಇರುತ್ತದೆ. ಸದರಿ 1 ಎಕರೆ ಜಮೀನನ್ನು 3 ರಿಂದ 5 ನೇ ಪ್ರತಿವಾದಿಗಳು ಸುಮಾರು 30 ವರ್ಷಗಳಿಂದ ದುಡಿಮೆ ಮಾಡುತ್ತಿದ್ದಾರೆ. ಸಾಕ್ಷಿ ಸ್ವತಃ ನನ್ನ ತಂದೆ ಮೃತರಾದ 3 ವರ್ಷದ ಬಳಿಕ ಮೂರು ಜನರು ಸೇರಿ ಉಳುಮೆ ಮಾಡುತ್ತಿದ್ದಾರೆ. 1 ಮತ್ತು 2 ನೇ ಪ್ರತಿವಾದಿಯರು ಸಹ ತಲಾ 1 ಎಕರೆ ವಿಸ್ತೀರ್ಣದ ಜಮೀನನ್ನು ಉಳುಮೆ ಮಾಡುತ್ತಾ ಇದ್ದಾರೆ. ಮೂರು ಜನರು ಪ್ರತ್ಯೇಕವಾಗಿ ಹಂಚಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸುಮಾರು 1995 ನೇ ಸಾಲಿನಿಂದ ಮೂರು ಜನರು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ.

2. ಎಲ್ಲಾ ಪ್ರತಿವಾದಿಯರು ಬೇರೆ ಬೇರೆ ಮನೆಯಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಮನೆ ನನ್ನ ತಂದೆಯದ್ದು ಇರುವುದಿಲ್ಲ ಅದು

ಸರ್ಕಾರದಿಂದ ಮಂಜೂರಾದ ಮನೆಯಿದ್ದು ಮೂರು ಜನರು ಮನೆ ನಿರ್ಮಾಣ ಮಾಡಿಕೊಂಡು ವಾಸವಿರುತ್ತಾರೆ.

3. ನನ್ನ ತಂದೆಯ ತಂದೆ ಪುಟ್ಟಯ್ಯ ಇವರ ಹೆಸರಿನಲ್ಲಿ ಬೆಟ್ಟದಪುರ ಗ್ರಾಮದಲ್ಲಿ ಸರ್ವೇ ನಂ.30 ರಲ್ಲಿ 30 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ತಂದೆ ತಾಯಿ ಭಾಗಕ್ಕೆ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಸಹೋದರರ ನಡುವೆ ದಾವಾ ಜಮೀನುಗಳು ವಿಭಾಗ ಆದಾಗ ಅದು ಬರವಣಿಗೆ ಮೂಲಕ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಬಾಯಿಮಾತಿನ ಮೂಲಕ ಹಂಚಿಕೊಂಡಿರುತ್ತಾರೆ ಎಂದು ಸಾಕ್ಷ್ಯನುಡಿಯುತ್ತಾರೆ.

4. ಪ್ರತಿವಾದಿಯರು ಬರವಣಿಗೆಯ ಮೂಲಕ ವಿಭಾಗ ಪತ್ರ ಮಾಡಿಕೊಂಡಿದ್ದು ಅದರ ದಾಖಲೆಗಳು 1 ನೇ ಪ್ರತಿವಾದಿಯ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪತ್ರವು 1 ನೇ ಪ್ರತಿವಾದಿ ಬಳಿ ಇರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಹೇಳಿಸಿ ನನ್ನಲ್ಲಿ ಈ ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ. 3 ರಿಂದ 5 ನೇ ಪ್ರತಿವಾದಿಗಳು ತಾವು ಉಳುಮೆ ಮಾಡುವ 1 ಎಕರೆ ಜಮೀನಿಗೆ ವಿಭಾಗ ಪತ್ರ ನೋಂದಣಿ ಮಾಡುವ ಸಲುವಾಗಿ ನಕ್ಷೆಗೆ ಸರ್ವೇ ಇಲಾಖೆಗೆ ದಿಃ 10.07.2019 ರಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ ಸರ್ವೇಯರ್ ಅಳತೆ ಮಾಡಲು ಬಂದಾಗ 3 ರಿಂದ

5 ನೇ ಪ್ರತಿವಾದಿಯರು ಉಳುಮೆ ಮಾಡುತ್ತಿದ್ದ ರಸ್ತೆಗೆ ತಾಗಿಕೊಂಡಿರುವ ಮುಂಭಾಗದ ಜಮೀನನ್ನು 3 ರಿಂದ 5 ನೇ ಪ್ರತಿವಾದಿಯರಿಗೆ ಕೊಡಬಾರದು ಎನ್ನುವ ಉದ್ದೇಶದಿಂದ ನನ್ನನ್ನು ಎತ್ತಿ ಕಟ್ಟಿ ಈ ದಾವೆಯನ್ನು ನನ್ನ ಮೂಲಕ 1 ಮತ್ತು 2 ನೇ ಪ್ರತಿವಾದಿಯರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈಗಾಗಲೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆಸ್ತಿಗಳು ವಿಭಾಗ ಆಗಿರುವುದರಿಂದ ನನಗೆ ದಾವಾ ಆಸ್ತಿಯಲ್ಲಿ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ